(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟ್ಸಿನಲ್ಲಿ ಇದರಹೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II. (*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟ್ಸಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದೆ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟ್ಸು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುವೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟ್ಸು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟು.

ಪ್ರ ಕ ಟ ನೆ.

ತಾರೀಖು 5ನೆ ಮಾರ್ಚಿ 1909.

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ರೆಕಾರ್ಡಿನಲ್ಲಿ ತಹಲ್ ವರಿವಿಗೂ ಭದ್ರಪಡಿಸಿಟ್ಟಿದ್ದ 1813 ಲಾಗಾಯಿತು 1883ನೆ ಸಾಲ್ ವರಿವಿಗಿನ ಕುಳವಾರ್ ಚಿಟ್ಟಗಳನ್ನು ಈ ಲಾಗಾಯಿತು ಮೂರು ತಿಂಗಳು ಕಳೆದನಂತರ ರೂಲ್ಸು ಪ್ರಕಾರ ನಾಶಪಡಿಸಲ್ಪಡುತ್ತೆಯಾದ್ದರಿಂದ ಇವುಗಳ ಕಾಪಿಯನ್ನು ಅಪೇಕ್ಷಿಸುವವರು ಇದ್ದಾಯಿದೆ ಅಂದರ್ ಅರ್ಜಿಕೊಟ್ಟು ಕಾಪಿ ಪಡೆಯಬಹುದಾಗಿರುತ್ತೆ.

ಎಂ. ಕಾಂತರಾಜೇ ಅರಸ್,
ಡೆಪ್ಯೂಟಿ ಕಮಿಷನರ್.

1909ನೆ ಇಸವಿ ಫೆಬ್ರವರಿ ತಾರೀಖು 27ನೆ ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಯವರ ಮೆಸ್ಸೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆಡ್ಜರ್ನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
3. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜ್ ಎಗ್ಸಿಕ್ಯೂಟಿವ್ ಇಂಜನಿಯರ್ರವರು).
4. ,, ವಿ. ಎಲ್. ಮಾಂಕರ್ರವರು (ಮೈಸೂರು ಸಿಟಿ ಹೆಲ್ತ್ ಆಫಿಸರ್)
5. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
6. ,, ಎಂ. ವೆಂಕಟಕೃಷ್ಣಯ್ಯನವರು